**ಓದುಗ:** ಸಾರ್ ನಂಗೀಗ 35 ವರ್ಷ ವಯಸ್ಸು, 'ನಮ್ಮ ಪಕ್ಷ ಅಧಿಕಾರಕ್ಕೆ ಬಂದ್ರೆ ಭ್ರಷ್ಟಾಚಾರ ಹೊಡೆದೋಡಿಸಲು ಶ್ರಮಿಸುತ್ತೇವೆ' ಅಂತ ರಾಜಕಾರಣಿಗಳು ಹೇಳೋದನ್ನ ನೀವು ಹಾಕ್ತಾನೇ ಇದೀರಿ. ನಾನು ಚಿಕ್ಕವನಿದ್ದಾಗಿಂದ ಓದ್ತಾನೇ ಇದೀನಲ್ರೀ?

**ಸಂಪಾದಕ:** ನಂಗೀಗ 70 ವರ್ಷ. ನಾನೂ ಚಿಕ್ಕವನಿದ್ದಾಗಿಂದ ಓದ್ತಾನೇ ಇದೀನಿ. ಪರಂಪರೆಯನ್ನು ಅವರೂ ಬಿಡ್ತಿಲ್ಲ. ನಾವೂ ಬಿಡ್ತಿಲ್ಲ.

***

**ಮೋನ:** ಯಾಕೋ ಮೂರ್ ದಿನ ಕೆಲಸಕ್ಕೆ ಬಂದಿರಲಿಲ್ಲ?

**ಸೀನ:** ನಮ್ಮ ದೊಡ್ಡವ್ವ ತೀರಕಂಡ್ಲು ಅದ್ಕೇ ಬಂದಿರ್ಲಿಲ್ಲ.

**ಮೋನ:** ಓ ಪಾಪ. ಅವರಿಗೆ ವಯಸ್ಸಾಗಿತ್ತಾ?

**ಸೀನ:** ಏ ಬಿಡೋ ಎಂಥ ಮಾತೂಂತ ಆಡ್ತೀ? ನಮಗೇ 50 ವರ್ಷ ಆಯ್ತು. ಇನ್ನು ನಮ್ಮ ದೊಡ್ಡವ್ವ ಚಿಕ್ಕವಳಿರ್ತಾಳಾ?

***

**ಅಮ್ಮ:** ನೋಡು ಮಗನೇ ನಿಮ್ಮಪ್ಪನೇ ನಮಗೆ ಆಸರೆ. ನೀನು ಅವರಿಗೆ ಗೌರವ ಕೊಡೋದನ್ನ ಕಲೀಬೇಕು.

**ಮಗ:** ಶಾಲೆ ಬಿಟ್ ಬಿಡ್ಲಾ ಅಮ್ಮಾ?

**ಅಮ್ಮ:** ಯಾಕೋ?

**ಮಗ:** ಏನೂಂತ ಕಲೀಬೇಕಮ್ಮಾ? ಇತ್ಲಾಗೆ ಶಾಲೆನೂ ಕಲೀ ಅಂತಿ. ಅತ್ಲಾಗೆ ಅದನ್ನೂ ಕಲೀ ಅಂತೀ? ಅದ್ಕೇ ಶಾಲೆ ಬಿಡಬೇಕಾ ಅಂತ ಕೇಳಿದೆ.

***

**ಕಲ್ಲಪ್ಪ:** ನನ್ನ ಮಗ ಮತ್ತೆ ಫೇಲ್ ಆದ ಕಣೋ. ಈ ಸಲಾನೂ ಬರೀ ಎರಡು ಮಾರ್ಕ್ಸ್ ಕಮ್ಮಿ ಬಂತು.

**ಯಲ್ಲಪ್ಪ:** ಮತ್ತೆ ಎರಡೇ ಮಾರ್ಕ್ಸಾ?

**ಕಲ್ಲಪ್ಪ:** ಹೌದು ಕಣೋ ಮತ್ತೆ ಎರಡೇ ಇದು 4ನೇ ಸಲ.

**ಯಲ್ಲಪ್ಪ:** ಏನೋಪಾ ನಂಗೂ ಕೇಳಿ ಕೇಳಿ ಸಾಕಾಗ್ ಹೋಗಿದೆ. ಅವನಿಗೆ ಆ ಎರಡ್ ಮಾರ್ಕ್ಸ್‌ದು ಉತ್ತರಾನಾ ಮೊದಲೇ ಬರೆಯಕ್ಕೆ ಹೇಳು. ಮುಂದಿನ್ ಸಲಾನಾದ್ರೂ ಪಾಸ್ ಆಗಬಹುದು.

***

**ಸೀನ:** ಭಾರತ ತಂಡ ನಿನ್ನೆ ಟಿ–20 ಮ್ಯಾಚಲ್ಲಿ ತನ್ನ ಪಾಲಿನ 20 ಓವರ್ ಬಾಲಿಂಗ್ ಮಾಡಲು 15 ನಿಮಿಷ ತಡ ಮಾಡಿದ್ದಕ್ಕೆ ಕ್ಯಾಪ್ಟನ್‌ಗೆ ದಂಡ ಹಾಕಿದರಂತೆ?

**ಸೀನ:** ಇನ್ನೇನಾಗುತ್ತೆ. ಪ್ರತಿ ಓವರ್‌ಗೊಮ್ಮೆ ಇಷ್ಟೊತ್ತು ಜಾಹೀರಾತು ಹಾಕ್ತಾ ಇದ್ರೆ ಬೌಲಿಂಗ್ ತಡ ಆಗಲ್ವಾ?

***













**ಓದುಗ:** ಏನ್ರೀ ನಾನು ಸತ್ತೇ ಇಲ್ಲ. ಆದ್ರೂ ನಿಮ್ ಪೇಪರ್‌ನ ನಿಧನವಾರ್ತೆ ಕಾಲಂನಲ್ಲಿ ನಾನು ಸತ್ ಹೋಗಿದೀನಿ ಅಂತ ಸುದ್ದಿ ಹಾಕಿದೀರಲ್ಲ?

**ಸಂಪಾದಕ:** ಓ ಹೌದಾ... ಸಾರಿರೀ. ಗೊತ್ತಾಗಲಿಲ್ಲ. ತಪ್ಪಾಗಿ ಬಂದಿದೆ. ನೀವೇನೂ ಬೇಜಾರಾಗ್ಬೇಡಿ. ನೀವು ಸತ್ತಿಲ್ಲ ಎಂದು ತಿಳಿಸಲು ವಿಷಾದಿಸುತ್ತೇವೆ ಅಂತ ನಾಳಿನ ಸಂಚಿಕೇಲಿ ಹಾಕ್ತೀವಿ ಬಿಡಿ.

***

**ವಿದ್ಯಾರ್ಥಿ:** ಪರಂಪರೆ ಅಂದ್ರೆ ಏನು ಸಾರ್?

**ಶಿಕ್ಷಕ:** ಹಿಂದಿನವರು ನಡೆಸಿಕೊಂಡು ಬಂದಿದ್ದನ್ನು ನಾವು ಮುಂದುವರಿಸಿಕೊಂಡು ಹೋಗೋದು ಪರಂಪರೆ.

**ವಿದ್ಯಾರ್ಥಿ:** ಓಹೋ ಹಾಗಾ ಸಾರ್. ಹೋದ್ ವರ್ಷ ನಮ್ ಕ್ಲಾಸ್ ಟೀಚರ್ ಏನೂ ಕಲಿಸ್ತಿರಲಿಲ್ಲ. ನೀವೂ ಅವರ ಪರಂಪರೇನೇ ಮುಂದುವರ್ಸಿದೀರಿ ಬಿಡಿ.

***

**ತಾಯಿ:** ಏಯ್ ಕಂದಾ 'ಸುಧಾ'ದಲ್ಲಿರೋ ಒಂದೇ ಪರ್ಟಿಕ್ಯುಲರ್ ಪೇಜನ್ನ ಯಾಕಯ್ಯಾ ನೆಕ್ತೀಯಾ?

**ಮಗ:** ಅಮ್ಮಾ ಇಲ್ಲೇ ಬರದಿದೆಯಲ್ಲ ನೆಕ್ಕಿ ಬಿಡಿ ಅಂತ. ಅದಕ್ಕೇ ನೆಕ್ತಾ ಇದೀನಮ್ಮಾ!

**ತಾಯಿ:** ಅಯ್ಯೋ ಪರಮಾತ್ಮಾ! ಅದು ನೆಕ್ಕಿ ಬಿಡಿ ಅಲ್ವೋ 'ನಕ್ಕು ಬಿಡಿ' ಅಂತ. ನಿನ್ ಸಂಬಂಧ ಸಾಕಾಗಿ ಹೋಗಿದೆ ನೋಡು..!

***

**ಗಂಡ:** ಮಗನಿಗೆ ಬುದ್ಧಿ ಹೇಳ್ತೀಯೋ ಇಲ್ವೋ?

**ಹೆಂಡತಿ:** ಯಾಕ್ರೀ ಅವನೇನ್ ಮಾಡ್ದಾ?

**ಗಂಡ:** ಅವನು ನನ್ ಮಾತೇ ಕೇಳಲ್ಲ.

**ಹೆಂಡತಿ:** ರೀ ಯಾವಾಗ್ಲೂ ನೀವು ಅವನೂ ನಿನ್ ಮಗ ನಿನ್ ಮಗ ಅಂತೀರಲ್ಲ? ಅದಕ್ಕೇ ಅವನು ನನ್ನನ್ನೇ ಫಾಲೋ ಮಾಡೋದು.

ಸಂಗ್ರಹ: ಸಿದ್ದಯ್ಯ ಹಿರೇಮಠ